ಓ ಎಸ್ 302/2016

ಪಿ ಡಬ್ಲ್ಯೂ1

ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕಃ 27-11-2019.

ಪಾಟೀ ಸವಾಲು ಃ- ಶ್ರೀ ಬಿ ವಿ ವಿ ವಕೀಲರಿಂದ

ಗಿರೀಗೌಡ ಬಿನ್ ತಿಮ್ಮೇಗೌಡ ನನಗೆ ಗೊತ್ತಿಲ್ಲ. ನನ್ನ ತಾತನ ಹೆಸರು ಗಿರೀಗೌಡ ,ಸದರಿ ನನ್ನ ತಾತನಿಗೆ ಎರಡು ಹೆಣ್ಣು ಎರಡು ಗಂಡುಮಕ್ಕಳು. ಅವರುಗಳೆಂದರೆ ಸಿ ಜಿ ನಂಜಪ್ಪ , ಕುಪ್ಪಣ್ಣ , ಬೋರಮ್ಮ , ಮತ್ತೊಬ್ಬರ ಹೆಸರು ನೆನಪಿಲ್ಲ. ದಾವಾ ಸ್ವತ್ತಿನ ಸರ್ವೆ ನಂ.56/1. ಆಗಿರುತ್ತದೆ . ಸದರಿ ಸ್ವತ್ತು ನನ್ನ ತಾತ ಬರೆದುಕೊಟ್ಟಿದ್ದು ನಂತರ ನಮ್ಮ ತಂದೆ ನಾವು ನಾಲ್ಕು ಜನ ಗಂಡುಮಕ್ಕಳಿಗೆ ಬರೆದುಕೊಟ್ಟಿರುತ್ತಾರೆ . ನಿಪಿ.1 ರಲ್ಲಿ 6 ಗುಂಟೆ ದೊಡ್ಡಕಾಳನ ಮಗ ಕರಿಯ ರವರಿಂದ ನನ್ನ ತಾತ ಗಿರೀಗೌಡರವರಿಗೆ ಕ್ರಯವಾಗಿದೆ ಎಂದರೆ ಸರಿ . ಹಾಗೂ ಸಾಕ್ಷಿಯು ಮುಂದುವರೆದು 4 ಗುಂಟೆಯನ್ನು ಸಹ ಕ್ರಯಕ್ಕೆ ಪಡೆದುಕೊಂಡಿರುತ್ತಾರೆಂದು ನುಡಿಯುತ್ತಾರೆ. ಸದರಿ 4 ಗುಂಟೆಗೆ ಸಂಬಂಧಿಸಿದ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಮಾಡಿರುತ್ತೇನೆ.

ನನ್ನ ತಾತ ಕ್ರಯಕ್ಕೆ ಪಡೆದಿರುವ ಸ್ವತ್ತಿನ ಪೂರ್ವಕ್ಕೆಃ ಕೋಟೆ ರೋಡ್ ,ಪಶ್ಚಿಮಕ್ಕೆಃ ಸೇಟುರವರ ಮನೆ ಅವರ ಹೆಸರು ಗೊತ್ತಿಲ್ಲ. ಉತ್ತರಕ್ಕೆಃ ಕೋಟೆ ರಸ್ತೆ , ದಕ್ಷಿಣಕ್ಕೆಃ ಸೇಟುರವರ ಮನೆ ಈ ಮಧ್ಯೆ ಇರುವ ಸ್ವತ್ತು ನನ್ನ ಸ್ವತ್ತಾಗಿದ್ದು ಸದರಿ ಸ್ವತ್ತಿನ ಮೇಲೆ ಈ ದಾವೆಯನ್ನು ಸಲ್ಲಿಸಿದ್ದೇನೆ . ನನ್ನ ತಂದೆಗೆ ದಾವಾ ಸ್ವತ್ತು ನನ್ನ ತಾತನಿಂದ ಪಾಲುಪಾರಿಕತ್ತು ಮೂಲಕ ಬಂದಿರಬಹುದು. ಸದರಿ ಆರು ಗುಂಟೆ ಪೈಕಿ ನನ್ನ ತಂದೆಗೆ ಎಷ್ಟು ಬಂದಿದೆ ಎಂದು ಗೊತ್ತಿಲ್ಲ. ಹಾಗೂ ನನ್ನ ತಂದೆಯ ಸಹೋದರರಿಗೆ ಎಷ್ಟು ಬಂದಿದೆ ಎಂದು ಗೊತ್ತಿಲ್ಲ. ಸದರಿ ಪಾಲುಪಟ್ಟಿಯನ್ನು ನ್ಯಾಯಾಲಯಕ್ಕೆ ಹಾಜರುಮಾಡಿಲ್ಲ . ನನ್ನ ತಂದೆಗೆ ನಾವು ಆರು ಜನ ಮಕ್ಕಳು . ದಾವಾ ಸ್ವತ್ತನ್ನು ನಾವು ನಾಲ್ಕು ಜನ ಸಹೋದರರು 10 ಗುಂಟೆ ಜಮೀನನ್ನು ಹಂಚಿಕೊಂಡಿದ್ದೇವೆ . ನನಗೆ ಮೂರುವರೆ ಗುಂಟೆ ಜಮೀನು

ಬಂದಿದೆ . ನನ್ನ ಸಹೋದರ ಶ್ರೀನಿವಾಸರವರಿಗೆ ಪೂಪ-16 ಅಡಿ , ಉಃದ-110 ಅಡಿ , ನನ್ನ ಸಹೋದರ ಕೃಷ್ಣರವರಿಗೆ 16 ಇಂಟು 110 ಅಡಿ ಬಂದಿದೆ , ರಾಜಣ್ಣರವರಿಗೆ 16 ಇಂಟು 110 ಅಡಿ ಬಂದಿದೆ . ನಾನು ಮತ್ತು ನನ್ನ ಸಹೋದರರು ದಾವಾ ಸ್ವತ್ತಿನ್ನು ಪಂಚಾಯಿತಿ ಪಾಲುಪಾರೀಖತ್ತು ಮೂಲಕ ಹಂಚಿಕೊಂಡಿದ್ದೇವೆ . ಸದರಿ ಪಾಲುಪಾರೀಖತ್ತು ಯಾವ ದಿನಾಂಕದಂದು ಆಗಿದೆ ಎಂದು ನೆನಪಿಲ್ಲ. ಸದರಿ ಪಾಲುಪಾರೀಖತ್ತನ್ನು ನ್ಯಾಯಾಲಯಕ್ಕೆ ಹಾಜರುಮಾಡಿದ್ದೇನೆ . ನಾನು ಯಾವುದೇ ಪಾಲುಪಾರೀಖತ್ತನ್ನು ಹಾಜರುಮಾಡಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಗಳ ವಿರುದ್ಧ ಯಾವ ಕಾರಣಕ್ಕಾಗಿ ದಾವಾ ಸಲ್ಲಿಸಿದ್ದೀರಿ ಎಂದರೆ ನಾನು ನನ್ನ ಮಗನಿಗೆ ದಾವಾ ಸ್ವತ್ತಿನಲ್ಲಿ ಪೆಟ್ಟಿಗೆ ಅಂಗಡಿ ಹಾಕಿಕೊಟ್ಟಿದ್ದು ಅದನ್ನು ತೆಗೆದು ಸದರಿ ಅಂಗಡಿಗೆ ಶೀಟ್ ಹಾಕಲು ಹೋದಾಗ ಅದಕ್ಕೆ ತೊಂದರೆ ನೀಡಿದ್ದರಿಂದ ಈ ದಾವೆ ಸಲ್ಲಿಸಿದ್ದೇನೆ .ನಿಪಿ-15 ರಲ್ಲಿರುವ ಫೊಟೋದಲ್ಲಿ ಕಾಣುವ ಬೇಸ್ ಮೆಂಟ್ ಹಾಕಿರುವ ಸ್ಥಳಕ್ಕೆ ಗಲಾಟೆಗೆ ಬಂದಿದ್ದರಿಂದ ಈ ದಾವಾ ಸಲ್ಲಿಸಿದ್ದೇನೆ . ಈ ದಾವೆ ಸಲ್ಲಿಸುವ ಕಾಲಕ್ಕೆ ನಿಪಿ-16 ಮತ್ತು 17 ರಲ್ಲಿ ಕಾಣುವ ಮನೆಗಳು ಇದ್ದವು ಎಂದರೆ ಸರಿ . ನಿಪಿ-15 ರಿಂದ 17 ರವರೆಗೆ ಕಾಣುವ ಮನೆಗೆ ಸಂಬಂದಿಸಿದಂತೆ ದಾವೆ ಸಲ್ಲಿಸಿ ನಿರ್ಬಂಧಕಾಜ್ಞೆ ಆದೇಶ ಪಡೆದಿದ್ದೇನೆಂದರೆ ಸರಿ . ಆದೇಶ ಪಡೆದ ನಂತರ ನಿಪಿ-28 ರಲ್ಲಿ ಕಾಣುವ ಮನೆಯನ್ನು ಕಟ್ಟಿದ್ದೇನೆಂದರೆ ಸರಿ . ಸಾಕ್ಷಿಯು ಮುಂದುವರೆದು ಮನೆ ಸೋರುತ್ತಿದ್ದರಿಂದ ಕಟ್ಟಿದ್ದೇನೆಂದು ನುಡಿಯುತ್ತಾರೆ . ಸದರಿ ನಿಪಿ-28 ರಲ್ಲಿ ಕಾಣುವ ಶೆಡ್ ನ ಮನೆಯನ್ನು ಬಿರ್ಯಾನಿ ಸೆಂಟರ್ ಗೆ ಕೊಟ್ಟಿದ್ದೇನೆಂದರೆ ಸರಿ . ನಿಪಿ-28 ರಲ್ಲಿ ಕಾಣುವ ಮಳಿಗೆ ಕಟ್ಟಲು ಲೈಸೆನ್ಸ ಪಡೆದಿಲ್ಲ. ಸಾಕ್ಷಿಗೆ ಒಂದು ಫೋಟೋವನ್ನುತೋರಿಸಲಾಗಿ ಅದನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾಯಿತು . ನಿಡಿ-1 ರಲ್ಲಿ ಕಾಣುವ ಶೀಟ್ ನ ಮನೆ ನಾನು ಇತ್ತೀಚೆಗೆ ಕಟ್ಟಿರುವ ಮಳಿಗೆ ಎಂದರೆ ಸರಿ . ಸಾಕ್ಷಿಯು ಮುಂದುವರೆದು ಸದರಿ ಮಳಿಗೆಯನ್ನು ಹಳೇ ಗೋಡೆಯ ಮೇಲೆ ಕಟ್ಟಿದ್ದೇನೆಂದು ನುಡಿಯುತ್ತಾರೆ . ನಮ್ಮ ಮನೆಯ ಪಕ್ಕದಲ್ಲಿ ಹರಿಜನ ಕಾಲೋನಿಗೆ ಸೇರಿದ ಬೋರ್ಡ ಇದೆ ಎಂದರೆ ಸರಿ . ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿದೆ ಅದನ್ನು ಒಪ್ಪಿದ್ದರಿಂದ ಅದನ್ನು ನಿಡಿ-2 ಎಂದು ಗುರುತಿಸಲಾಯಿತು .

ಪಿ ಡಬ್ಲ್ಯೂ1

ಸದರಿ ಫೋಟೋದಲ್ಲಿ ಕಾಣುವ ಅಂಗಡಿ ಮಳಿಗೆಯ ಪಕ್ಕ ಕಾಣುತ್ತಿರುವ ಖಾಲಿ ಜಾಗ ನನಗೆ ಸೇರಿದ್ದು.

ನನ್ನ ಸ್ವತ್ತನ್ನು ನಾನು ಅಳತೆಮಾಡಿಸಿಲ್ಲ. ನಾನು ನ್ಯಾಯಾಲಯದ ಆದೇಶವನ್ನು ಪಡೆದುಕೊಂಡು ಹರಿಜನಕಾಲೋನಿಗೆ ಸೇರಿದ ಭೂಮಿ ಸರ್ವೆ ನಂ.57 ರ ವಿಸ್ತೀರ್ಣ 14 ಗುಂಟೆ ಸ್ವತ್ತಿನಲ್ಲಿ ಒತ್ತುವರಿಮಾಡಿಕೊಂಡು ಅಕ್ರಮವಾಗಿ ರಾತ್ರೋರಾತ್ರಿ ಅಂಗಡಿ ಮಳಿಗೆ ಕಟ್ಟಿದ್ದೇನೆಂದರೆ ಸರಿಯಲ್ಲ. ಸರ್ವೆ ನಂ.57 ದುರಸ್ಥಾಗಿ ಸರ್ವೆ ನಂ.57/2 ಎಂದು ಆಗಿದೆ ಎಂದರೆ ಸರಿಯಲ್ಲ. ನಿಡಿ1 ಮತ್ತ 2 ರಲ್ಲಿ ಕಾಣುವ ಸಣ್ಣೇಗೌಡರ ಮಟರ್ ಬಿರ್ಯಾನಿ ಎಂಬ ಅಂಗಡಿಯ ಪಕ್ಕ ಕಾಣುವ ಖಾಲಿ ಜಾಗಕ್ಕೆ ಸಂಬಂಧಿಸಿದಂತೆ ದಾಖಲೆ ಹಾಜರುಮಾಡುತ್ತೇನೆ . ನಿಡಿ1 ಮತ್ತು 2 ರಲ್ಲಿರುವ ಖಾಲಿ ಜಾಗ ಸರ್ವೆ ನಂ. 57/2 ರ ಜಾಗ ಪ್ರತಿವಾದಿಗಳಿಗೆ ಸೇರಿದೆ ಎಂದರೆ ಸರಿಯಲ್ಲ. ಸದರಿ ನಿಡಿ1 ಮತ್ತು 2 ರಲ್ಲಿ ಕಾಣುವ ಖಾಲಿಜಾಗದಲ್ಲಿ ನಾನು 15 ಇಂಟು 40 ಅಡಿ ಸ್ವತ್ತನ್ನು ಸರ್ವೆ ನಂ. 57/2 ಒತ್ತುವರಿಮಾಡಿಕೊಂಡು ರಾತ್ರೋರಾತ್ರಿ ಮಳಿಗೆಯನ್ನು ಕಟ್ಟಿದ್ದೇನೆಂದರೆ ಸರಿಯಲ್ಲ.

ನಿಡಿ1 ಮತ್ತು 2 ರಲ್ಲಿ ಕಾಣುವ ಮಳಿಗೆಯನ್ನು ಕಟ್ಟಲು ಪ್ರಾರಂಭಿಸಿದಾಗ ಪ್ರತಿವಾದಿಗಳು ಪುರಸಭೆಗೆ ದೂರು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಮಳಿಗೆ ಕಟ್ಟು ಸಮಯದಲ್ಲಿ ಪುರಸಭೆ ಆಧಿಕಾರಿಗಳು ಬಂದಿದ್ದರು .

ಮುಂದುವರೆದ ಪಾಟೀ ಸವಾಲಿಗಾಗಿ ಸಮಯವಕಾಶ ಕೋರಿದ್ದು ನೀಡಲಾಯಿತು .

ಮರು ವಿಚಾರಣೆ :- ಇಲ್ಲ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

(ಎಸ್.ಚಿನ್ನಸ್ವಾಮಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ.

ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕಃ 06-11-2019.

ಪಾಟೀಸವಾಲು ಃ- ಶ್ರೀ ಕೆ ಎನ್ ಎಸ್ ವಕೀಲರಿಂದ

ನನ್ನ ತಂದೆ ನನ್ನನ್ನು ಸರಿಯಾಗಿ ನೋಡಿಕೊಳ್ಳದ ಕಾರಣ ಈ ದಾವೆ ಸಲ್ಲಸಿದ್ದೇನೆ . ಈ ದಾವೆಯನ್ನು ಮೂರು ಸ್ವತ್ತುಗಳಿಗಾಗಿ ಸಲ್ಲಿಸಿದ್ದೇನೆ . ನಾನು ಪರಮ ಗ್ರಾಮಕ್ಕೆ 20 ವರ್ಷಗಳ ಹಿಂದೆ ಮದುವೆಯಾಗಿದ್ದೇನೆ . ಐಟಂನಂ ನಂ.1 ರ ಪೂರ್ವ ದಿಕ್ಕಿಗೆಃ ನಂಜಪ್ಪ , ಪಶ್ಚಿಮಕ್ಕೆಃ ನಿಂಗಪ್ಪ , ಉತ್ತರಕ್ಕೆ ನಿಂಗಪ್ಪ , ದಕ್ಷಿಣಕ್ಕೆ ಪುಟ್ಟಮ್ಮ .

ಐಟಂ ನಂ.2 ರ ಸ್ವತ್ತಿನ ಚೆಕ್ಕುಬಂಧಿ ಗೊತ್ತಿಲ್ಲ ಹಾಗೂ ಐಟಂ ನಂ.3 ರ ಚೆಕ್ಕುಬಂಧಿ ಗೊತ್ತಿಲ್ಲ. 2 ನೇ ಪ್ರತಿವಾದಿ ನನ್ನ ಅಣ್ಣ 20 ವರ್ಷಗಳಿಂದ ಎಲ್ಲಿದ್ದಾನೆಂದು ಗೊತ್ತಿಲ್ಲ. ಆತನ ಹೆಂಡತಿ ರೇಣುಕ ಹಾಗೂ ಮಗ ರಾಹುಲ್ ಎಂದರೆ ಸರಿ . ಸದರಿಯವರು ನನ್ನ ಮತ್ತು ನನ್ನ ತಂದೆಯ ವಿರುದ್ಧ ಓ ಎಸ್ ನಂ. 20ಃ2013 ನ್ನು ಸಲ್ಲಿಸಿದ್ದಾರೆಂದರೆ ಸರಿ . ನಮ್ಮ ತಂದೆಗೆ ದಾವಾ ಸ್ವತ್ತುಗಳು ಹೇಗೆ ಬಂದಿವೆ ಎಂದು ತೋರಿಸಲು ಎಂ ಆರ್ ಹಾಜರುಮಾಡಿದ್ದೇನೆ .

ಕೆಂಪಮ್ಮ ಎಂಬುವವರು ನನ್ನ ತಂದೆಯ ಸಾಕು ತಾಯಿ . ನನ್ನ ತಾಯಿಯ ಹೆಸರು ಗೌರಮ್ಮ. ನನ್ನ ತಾತನ ಹೆಸರು ನಂಜೇಗೌಡ. ನನ್ನ ತಂದೆಯ ದೊಡ್ಡಪ್ಪ ನಂಜಲಿಂಗೇಗೌಡ ಗೊತ್ತು. ಸದರಿ ನಂಜಲಿಂಗೇಗೌಡರ ತಂಗಿ ಕೆಂಪಮ್ಮ ಎಂದರೆ ಸರಿ . ನನ್ನ ತಂದೆಯನ್ನು ಕೆಂಪಮ್ಮ ಸಾಕು ಮಗನಾಗಿ ಸಾಕಿಕೊಂಡಿದ್ದರು ಎಂದರೆ ಸರಿ . ಮೇಲ್ಕಂಡ ನಂಜಲಿಂಗೇಗೌಡ ದಾವಾ ಸ್ವತ್ತುಗಳನ್ನು ವ್ಯವಸ್ಥಾ ಪತ್ರದ ಮೂಲಕ ದಿನಾಂಕ 19-11-1954 ರಲ್ಲಿ ನೀಡಿದ್ದಾರೆಂದರೆ ಸರಿ . ಸದರಿ ವ್ಯವಸ್ಥಾ ಪತ್ರವಾದ ನಂತರ ಹಾಗೂ ಕೆಂಪಮ್ಮನವರ ಮರಣಾ ನಂತರ ದಾವಾ ಸ್ವತ್ತುಗಳನ್ನು ನನ್ನ ತಂದೆ ಸ್ವಯಾರ್ಜಿತವಾಗಿ ಅನುಭವಿಸುತ್ತಿದ್ದಾರೆಂದರೆ ಸರಿ .

ನನ್ನ ತಂದೆಗೆ ಮೂರು ಜನ ಹೆಂಡತಿಯರು ಎಂದರೆ ಸರಿ . ಮೊದಲನೇ ಹೆಂಡತಿ ಲಕ್ಷ್ಮಮ್ಮ , ಲಕ್ಷ್ಮಮ್ಮ ತೀರಿಕೊಂಡ ನಂತರ ನನ್ನ ತಾಯಿ ಗೌರಮ್ಮನನ್ನು ಮದುವೆಯಾಗಿರುತ್ತಾರೆಂದರೆ ಸರಿ . ನನ್ನ ತಾಯಿ ತೀರಿಕೊಂಡ ನಂತರ ಜಯಮ್ಮ ರವರನ್ನು ವಿವಾಹವಾಗಿದ್ದಾರೆಂದರೆ ಸರಿ .

ದಾವಾ ಸ್ವತ್ತುಗಳ ಪೈಕಿ ಕೆಲವು ಸ್ವತ್ತುಗಳನ್ನು ಈಗಾಗಲೇ ಸುಮಾರು ನಾಲ್ಕು ಜನರಿಗೆ ಮಾರಾಟಮಾಡಿದ್ದಾರೆಂದರೆ ಸರಿ . ಮೇಲ್ಕಂಡ ಕ್ರಯದಾರರು ಹಾಗೂ ನನ್ನ ಅಣ್ಣನ ಹೆಂಡತಿ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇಲ್ಲ.

ನನ್ನ ತಾತ ತನ್ನ ಪಿತ್ರಾರ್ಜಿತ ಆಸ್ತಿಗಳನ್ನು ಸುಮಾರು ವರ್ಷಗಳ ಹಿಂದೆಯೇ ಮಾರಾಟಮಾಡಿರುತ್ತಾರೆಂದರೆ ಸರಿ . ಸದರಿ ಸ್ವತ್ತು ಈಗ ನಾಗರಾಜುರವರ ಹೆಸರಿನಲ್ಲಿದೆ ಎಂದರೆ ಸರಿ . ಸದರಿ ಪಿತ್ರಾರ್ಜಿತ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ . ನನ್ನ ತಾತನಿಂದ ನನ್ನ ತಂದೆಗೆ ಯಾವುದೇ ಪಿತ್ರಾರ್ಜಿತ ಆಸ್ತಿ ಬಂದಿಲ್ಲ ಎಂದರೆ ಸರಿ .ದಾವಾ ಸ್ವತ್ತುಗಳು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿ .

<u>ಮರು ವಿಚಾರಣೆ</u> :- ಇಲ್ಲ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

(ಎಸ್.ಚಿನ್ನಸ್ವಾಮಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ.